ತುಮಕೂರು, ಹಿರಿಯೂರು, ಹಾವೇರಿ, ಎಲ್ಲಾ ರಸ್ತೆಗಳು ಸೇರಿವೆ. ಇದಕ್ಕೆಲ್ಲಾ ಲ್ಯಾಂಡ್ ಅಕ್ವಾಯರ್ ಮಾಡುವಂತಹ ಕೆಲಸ ಪ್ರಾರಂಭ ಮಾಡಿದ್ದೇವೆ.

ಅರ್ಜುನ ಪ್ರಶಸ್ತಿ ವಿಜೇತ ಯಶೋಧರನಿಗೆ ಆಗಿರುವ ಅನ್ಯಾಯ.

75(603)

ಶ್ರೀ ಯೋಗೀಶ್ ಭಟ್.ಎನ್(ಮಂಗಳೂರು): ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ, ಅಂತರ ರಾಷ್ಟ್ರೀಯ ಕ್ರೀಡೆಗಳಲ್ಲಿ ರಾಜ್ಯಕ್ಕೆ ಕೀರ್ತಿ ತಂದಿರುವ ಕ್ರೀಡಾಪಟುಗಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು?

ಆ) ಅರ್ಜುನ ಪ್ರಶಸ್ತಿ ವಿಜೇತ ಯಶೋಧರನಿಗೆ (ಅಬಕಾರಿ ಇಲಾಖೆ) ಕಳೆದ 9 ತಿಂಗಳುಗಳಿಂದ ವೇತನ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಬೇಜವಾಬ್ದಾರಿ ಅಧಿಕಾರಿಗಳನ್ನು ಗುರುತಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಕ್ರೀಡಾಪಟುಗಳಿಗೆ ಇಲಾಖೆಯಿಂದ ಈ ಕೆಳಕಾಣಿಸಿದಂತೆ, ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಕ್ರೀಡಾಪಟುಗಳಿಗೆ ಕ್ರೀಡಾ ಮೀಸಲಾತಿಯಡಿಯಲ್ಲಿ ಸೀಟುಗಳನ್ನು ಕಾಯ್ದಿರಿಸಲಾಗುತ್ತಿದೆ.

2. ಅತ್ಯುತ್ತಮ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ಪಾರಿತೋಷಕವನ್ನು ನೀಡಿ ಸನ್ಮಾನಿಸಲಾಗುವುದು.

3. ರಾಷ್ಟ್ರ ಹಾಗೂ ಅಂತರ ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ಕ್ರೀಟಾ ಪಟುಗಳಿಗೆ ಪ್ರಯಾಣ ಭತ್ಯ ಹಾಗೂ ದಿನಭತ್ಯೆಯನ್ನು ಕೊಡಲಾಗುತ್ತಿದೆ.

4. ಆದ್ಯತೆಯ ಮೇರೆಗೆ ಬೆಂಗಳೂರಿನಲ್ಲಿ ಹಾಗೂ ರಾಜ್ಯದ ಇತರ ನಗರಗಳಲ್ಲೂ ಸಹ ಕ್ರೀಡಾ ಪಟುಗಳಿಗೆ ನಿವೇಶನಗಳನ್ನು ನೀಡಲಾಗುತ್ತಿದೆ.

5. ಆರ್ಥಿಕವಾಗಿ ಕಷ್ಟ ಪರಿಸ್ಥಿತಿಯಲ್ಲಿರುವಂತಹ ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಹಾಗೂ ಕುಸ್ತಿಪಟುಗಳಿಗೆ ಮಾಸಾಶನವನ್ನು ಇಲಾಖಾ ವತಿಯಿಂದ ಕೊಡಲಾಗುತ್ತಿದೆ.

6. ನುರಿತ ಕ್ರೀಡಾ ತರಬೇತುದಾರರಿಂದ ರಾಷ್ಟ್ರ ಹಾಗೂ ಅಂತರ ರಾಷ್ಟ್ರ ಮಟ್ಟದ ಕ್ರೀಡಾಪಟುಗಳಿಗೆ ಕ್ರೀಡಾ ತರಬೇತಿಯನ್ನು ನೀಡಲಾಗುತ್ತಿದೆ.

ಅ) ಈ ನೌಕರರು ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಇವರಿಗೆ ವೇತನ ನೀಡದಿರುವ ಬಗ್ಗೆ ತನಿಖೆ ನಡೆಸಿ, ವರದಿ ನೀಡಲು ಆರ್ಥಿಕ ಇಲಾಖೆ (ಅಬಕಾರಿ) ಇವರನ್ನು ಕೋರಲಾಗಿದೆ.

ಇ) ವರದಿ ಬಂದ ನಂತರ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಆರು ಲಕ್ಷ ಸರ್ಕಾರಿ ನೌಕರರಲ್ಲಿ ಒಬ್ಬರಾದ ಶ್ರೀ ಪಿ.ಕೆ.ಯಶೋಧರವರು 1978ರಿಂದ 1992ರವರೆಗೆ 1984, 1987 ಹಾಗೂ 1990 ರಲ್ಲಿ ಐದು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು. ಮತ್ತೆ ಅರ್ಜುನ ಪ್ರಶಸ್ತಿ ವಿಜೇತರಾಗಿದ್ದಾರೆ. ಇವರಿಗೆ ಕಳೆದ 9 ತಿಂಗಳುಗಳಿಂದ ಸಂಬಳವನ್ನು ಕೊಟ್ಟಿಲ್ಲ. ಈ ವಿಚಾರವನ್ನು ಕಳೆದ ಅಧಿವೇಶನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಆಗ ಈ ವಿಷಯವನ್ನು ಗಮನಿಸಲಾಗುವುದು ಮತ್ತು ಕೊಡಲಾಗುವುದೆಂದು ಹೇಳಿದ್ದರು. ಈ ಜನವರಿ ತಿಂಗಳಿನಿಂದ ಪ್ರಶ್ನೆಯನ್ನು ಕೇಳಿದರೂ ಯಾವುದೇ ರೀತಿಯ ಫಲಿತಾಂಶವಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರು ಕಂಬಳ ಕ್ರೀಡೆಗೆ ತೋರಿಸುವಂತಹ ಆಸಕ್ತಿಯನ್ನು ಈ ಅರ್ಜುನ ಪ್ರಶಸ್ತಿ ವಿಜೇತರ ಮೇಲೆ ತೋರಿಸದೇ ಇರುವುದರಿಂದ ಆಗಿರುವಂತಹ ಹಾನಿ ಏನೆಂದರೆ ಈ ನೌಕರ ಹೃದಯಾಘಾತದಿಂದ ದೈವಾಧೀನರಾಗುವಂತಹ ದುಃಸ್ಥಿತಿ ಬಂತು. ಇಂತಹ ಒಬ್ಬ ಅರ್ಜುನ ಪ್ರಶಸ್ತಿ ಪಡೆದಂತಹ ಕ್ರೀಡಾಪಟುವನ್ನು ಬಲಿ ಕೊಡುವಂತಹ ನಿರ್ಲಕ್ಷತನ ಸರ್ಕಾರದಿಂದ ಆಗಿದೆ, ಎಂದು ಹೇಳುತ್ತೇನೆ. ಈಗ ತಾವು ಸರ್ಕಾರಿದಿಂದ ಏನು ಪರಿಹಾರವನ್ನು ಕೊಡುವವರಿದ್ದೀರಿ, ಅವರ ಕುಟುಂಬಕ್ಕೆ ಏನಾದರೂ ಪರಿಹಾರ ಕೊಡುತ್ತೀರಾ? ಅವರ ಮಗನಿಗೆ ಕೆಲಸ ಕೊಡುತ್ತೀರಾ? ಈಗ ಆಗಿರುವಂತಹ ಅನ್ಯಾಯದ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡಿ ಸಂಬಂಧಪಟ್ಟಂತಹ ಅಧಿಕಾರಿಯನ್ನು ಶಿಕ್ಷೆಗೆ ಒಳಪಡಿಸುತ್ತೀರಾ? ಎಂದು ಮಾನ್ಯ ಮಂತ್ರಿಯವರನ್ನು

ಕೇಳುತ್ತೇನೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಶ್ರೀ ಪಿ.ಕೆ.ಯಶೋಧರರವರು ಅಬಕಾರಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಆ ದೃಷ್ಟಿಯಿಂದ ನಮ್ಮ ಇಲಾಖೆ ಅಬಕಾರಿ ಇಲಾಖೆಯಿಂದ ಪೂರ್ಣ ವರದಿಯನ್ನು ಕೇಳಿದೆ. ಆ ವರದಿ ಬಂದ ಮೇಲೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಉಪ ಪ್ರಶ್ನೆಯನ್ನು ಕೇಳಬಾರದೆಂದು ಇದ್ದೆ, ಏಕೆಂದರೆ ಮಾನ್ಯ ಮಂತ್ರಿಯವರು ಇನ್ನು ಹೊಸದಾಗಿ ಬಂದಿದ್ದಾರೆ. ನಾನು ಪ್ರಶ್ನೆ ಕೇಳುವಂಥಾದ್ದು ಸೂಕ್ತವಲ್ಲವೆಂದು ಅಂದುಕೊಂಡಿದ್ದೆ. ಆದರೆ ಸರ್ಕಾರ ಕೊಟ್ಟಿರುವಂತಹ ಉತ್ತರವನ್ನು ಓದಿದರೆ ಎಷ್ಟು ಬೇಜವಾಬ್ದಾರಿತನವಿದೆ, ಎಂದರೆ ಸರ್ಕಾರದವರು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆ ಎಂದು ಹೇಳುವಂಥಾದ್ದು, ಅರ್ಥವಾಗುವುದಿಲ್ಲ. ಇದು ಅಬಕಾರಿ ಇಲಾಖೆ ಎನ್ನುವಂಥಾದ್ದು, ಇವರು ಯುವಜನ ಸೇವೆ ಮತ್ತು ಕ್ರೀಡೆ ಮಂತ್ರಿಗಳು ಇದಕ್ಕೆ ತಾಳಮೇಳ ಏನಾದರೂ ಇದೆಯಾ? ಇವರು ಅಬಕಾರಿ ಇಲಾಖೆಯಿಂದ ವರದಿಯನ್ನು ತರಿಸುತ್ತಾರಂತೆ, ಆಮೇಲೆ ಉತ್ತರ ಕೊಡುತ್ತಾರೆಂದು, ಈ ರೀತಿಯಾದಂತಹ ಬೇಜವಾಬ್ದಾರಿಯಾದಂತಹ ಉತ್ತರ ಹೇಗೆ ಬರುತ್ತದೆ. ಮಾನ್ಯ ಸದಸ್ಯರು ಜನವರಿ ತಿಂಗಳಲ್ಲಿ ಪ್ರಶ್ನೆಯನ್ನು ಕಳುಹಿಸಿದ್ದಾರೆ, ಇಲ್ಲಿಯವರೆಗೂ ಅಬಕಾರಿ ಇಲಾಖೆಯಿಂದ ವರದಿಯನ್ನು ತರಿಸಿಕೊಂಡಿಲ್ಲ, ಅಲ್ಲಿಂದ ವರದಿ ತರಿಸಿಕೊಂಡು ಹೇಳುತ್ತೇನೆಂದು ಹೇಳುತ್ತಿದ್ದಾರೆ. ಈ ಕ್ರೀಡಾಪಟು ಮೃತರಾಗಿದ್ದಾರೆಂದು ಹೇಳುತ್ತಿದ್ದಾರೆ, ಇಲ್ಲಿ ಮಾನವೀಯತೆಯನ್ನು ಮರೆಯುವಂಥವರಿಗೆ ಏನೆಂದು ಹೇಳಬೇಕಾಗುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್(ಮಾನ್ಯ ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ತಾವು ಈ ರೀತಿಯಾಗಿ ಅರ್ಥ ಮಾಡಿಕೊಳ್ಳಬಾರದು. ಇದು ಬೇರೆ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ವಿಷಯ ಏನೆಂದು ತಿಳಿದುಕೊಳ್ಳುವುದಕ್ಕೆ ಅಲ್ಲಿಂದ ವರದಿಯನ್ನು ತರಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಅವರಿಗೆ ನಾನು ಆದೇಶ ಕೊಡುತ್ತೇನೆನ್ನುವ ಅರ್ಥದಲ್ಲಿ ಹೇಳಿಲ್ಲ.

ಶ್ರೀ ಸಿ.ಬೈರೇಗೌಡ: ಮಾನ್ಯ ಸದಸ್ಯರು ಜನವರಿ ತಿಂಗಳಲ್ಲಿ ಕೊಟ್ಟಿರುವಂಥಾದ್ದು ಇಲ್ಲಿ ಮಾನವೀಯತೆಯನ್ನು ಮರೆಯುವಂಥಾದ್ದು ಆಗಿದೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ ಮೃತರ ಕುಟುಂಬಕ್ಕೆ ತೊಂದರೆಯಾಗಿದೆ, ಇದಕ್ಕೆ ಬೇಜವಾಬ್ದಾರಿ ಅಧಿಕಾರಿ ಯಾರೆಂದು ಗುರುತಿಸಿ ಎಂದು ಕೇಳಿದ್ದಾರೆ. ಮಾನ್ಯ ಮಂತ್ರಿಯವರು ಇದು ಅವರ ಇಲಾಖೆಗೆ ಸಂಬಂಧವಿಲ್ಲದ ಕಾರಣ

ಅಬಕಾರಿ ಇಲಾಖೆಯಿಂದ ವರದಿಯನ್ನು ತರಿಸಿಕೊಳ್ಳುತ್ತೇನೆಂದು ಹೇಳಿದರು. ಈ ವಿಷಯ ನಿಜವಾದರೆ ಪತ್ರವನ್ನು ಬರೆಯಬಹುದು ಎಂದು ಹೇಳಿದ್ದಾರೆ. ಅವರು ಅಬಕಾರಿ ಇಲಾಖೆಯ ಕೆಲಸವನ್ನು ತಾವೇ ಮಾಡುತ್ತೇವೆನ್ನುವ ಅರ್ಥದಲ್ಲಿ ಹೇಳಲಿಲ್ಲ. ತಾವು ಆ ರೀತಿಯಾಗಿ ಭಾವಿಸಬಾರದು.

ಅಧ್ಯಕ್ಷರು: ಮಾನ್ಯ ಎಸ್.ಎಸ್.ಮಲ್ಲಿಕಾರ್ಜುನ್‌ರವರೇ, ಆದಷ್ಟು ಬೇಗ ಅಬಕಾರಿ ಇಲಾಖೆಯಿಂದ ವರದಿಯನ್ನು ತರಿಸಿಕೊಳ್ಳಿ, ಸುಮ್ಮನಿದ್ದರೆ ಹೇಗೆ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಇಲ್ಲಿ ಆರು ಲಕ್ಷ ಸರ್ಕಾರಿ ನೌಕರರಲ್ಲಿ ಒಬ್ಬರೇ ಅರ್ಜುನ ಪ್ರಶಸ್ತಿ ವಿಜೇತರಾಗಿರುವವರು. ಮಾನ್ಯ ಸದಸ್ಯರು ಜನವರಿ ತಿಂಗಳಲ್ಲಿ ಪ್ರಶ್ನೆಯನ್ನು ಕಳುಹಿಸಿದ್ದಾರೆ. ಸರ್ಕಾರದಿಂದ ಇದೇ ಉತ್ತರ ಬಂದಿದೆ. ಈ ನೌಕರನಿಗೆ ಸಂಬಳವನ್ನು ಕೊಡದೇ ಇದ್ದ ಕಾರಣ ಮಾನಸಿಕ ಗೊಂದಲಕ್ಕೆ ಈಡಾಗಿ ಮೃತರಾಗಿದ್ದಾರೆ. ಈಗ ಸರ್ಕಾರದ ವತಿಯಿಂದ ಅವರ ಕುಟುಂಬಕ್ಕೆ ಏನು ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದೆ? ಇಲ್ಲಿ ಮತ್ತೊಂದು ಪ್ರಮುಖವಾದ ಸಂಗತಿ ಏನೆಂದರೆ ಇವರ ಕುಟುಂಬದವರು ಬೀದಿಗೆ ಬರುವಂಥಾದ್ದು ಆದರೆ ಈ ಕ್ರೀಡಾಪಟುಗಳಿಗೆ ಉತ್ತೇಜನ ಕೊಟ್ಟಹಾಗೆ ಆಗುವುದಿಲ್ಲ. ಆದುದರಿಂದ ತಾವು ಅವರ ಕುಟುಂಬದವರಿಗೆ ತಕ್ಷಣ ಪರಿಹಾರವನ್ನು ಕೊಡುವಂಥಾದ್ದು ಮತ್ತು ಅವರ ಮಗನಿಗೆ ಕೆಲಸ ಕೊಡುವಂಥಾದ್ದು, ಇದನ್ನು ಯಾವ ರೀತಿಯಲ್ಲಿ ಮಾಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಇದು ನಮ್ಮ ಇಲಾಖೆಗೆ ಸಂಬಂಧಪಟ್ಟದ್ದು ಆಗಿದ್ದರೆ, ಇಷ್ಟು ಹೊತ್ತಿಗೆ ನಾನು ಉತ್ತರವನ್ನು ಕೊಡುತ್ತಿದ್ದೆ, ಆದರೆ ಇದು ಅಬಕಾರಿ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ಅಲ್ಲಿಂದ ನಾವು ಸಂಪೂರ್ಣ ಮಾಹಿತಿಯನ್ನು ಕೇಳಿದ್ದೇನೆ. ಈ ಪ್ರಶ್ನೆ ಕಳೆದ ಬಾರಿ ಅಬಕಾರಿ ಇಲಾಖೆಗೆ ಬಂದಿತ್ತು, ನಮ್ಮ ಇಲಾಖೆಗೆ ಬಂದಿರಲಿಲ್ಲ. ಈಗ ನಮ್ಮ ಇಲಾಖೆಗೆ ಬಂದಿದೆ, ನಾನು ಆದಷ್ಟು ಬೇಗ ಅಲ್ಲಿಂದ ಸಂಪೂರ್ಣ ವರದಿಯನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಪ್ರಶ್ನೆಯನ್ನು ಕೇಳಿದ್ದಾರೆ, 15 ದಿವಸಗಳಿಗೂ ಮುಂಚೆ ಪ್ರಶ್ನೆಯನ್ನು ಕೇಳಿದ್ದಾರೆ. ಈ ಕ್ರೀಡಾಪಟು ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು, ಎಂದಮೇಲೆ ಅಲ್ಲಿಂದ ಮಾಹಿತಿಯನ್ನು ತೆಗೆದುಕೊಳ್ಳಬೇಕಾಗಿತ್ತು.

12.30 ಪಿ.ಎಂ.

ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಸರ್ಕಾರಿ ನೌಕರಿಯಲ್ಲಿರುವ ಕ್ರೀಡಾ ಪಟುಗಳಿಗೆ ವರ್ಗಾವಣೆಯಲ್ಲಿ ಹಾಗೂ ಬಡ್ತಿಯಲ್ಲಿ ಈ ರೀತಿಯ ತೊಂದರೆಗಳಾಗುತ್ತಿದ್ದರೆ, ಕರ್ನಾಟಕ ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಏನು ಪ್ರೋತ್ಸಾಹ ಕೊಟ್ಟಂತಾಗುತ್ತದೆ? ಮೊನ್ನೆ ಮುಖ್ಯಮಂತ್ರಿಗಳು ನಿಧಾನಗತಿಯಲ್ಲಿ ಕೆಲಸ ಮಾಡುವವರ ಮೇಲೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದರು. ಇದು ಅಬಕಾರಿ ಇಲಾಖೆಗೆ ಸಂಬಂಧಿಸಿದೆಂದು ಸಬೂಬು ಹೇಳಿ ಉತ್ತರ ಕೊಡುವ ಪರಿಸ್ಥಿತಿ ಇವತ್ತು ರಾಜ್ಯ ಸರ್ಕಾರಕ್ಕೆ ಬಂದಿದೆ ಎಂದರೆ, ಈ ರಾಜ್ಯ ಸರ್ಕಾರಕ್ಕೆ ಬಂದಿರುವ ಇಂತಹ ಚಿಂತಾಜನಕ ಸ್ಥಿತಿಯನ್ನು ನಾನು ಬೇರೆಲ್ಲೂ ನೋಡಿಲ್ಲ.

ಅಧ್ಯಕ್ಷರು: ಮಂತ್ರಿಗಳಾದ, ಮಲ್ಲಿಕಾರ್ಜುನ್‌ರವರೆ, ಪ್ರಶ್ನೆಯನ್ನು ಅವರಿಗೆ ಕಳುಹಿಸಿ ಕೊಡುವುದಷ್ಟೆ ಅಲ್ಲ, ಅದನ್ನು ಪರಿಶೀಲನೆ ಮಾಡಬೇಕು ಅಥವಾ ನಿಮ್ಮ ಕಛೇರಿಯವರು ಅವರಿಗೆ ದೂರವಾಣಿ ಮಾಡಿ ಬೇಗ ಕಳುಹಿಸಿಕೊಡಬೇಕೆಂದು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇನ್ನು ಯಾರ್ಯಾರು ಸಾಯಬೇಕೆಂದು ಅಪೇಕ್ಷೆಪಡುತ್ತಾರೊ ಕೇಳಬೇಕು. ಯಶೋಧರ ಎಂಬುವರು ಒಂಬತ್ತು ತಿಂಗಳು ಸಂಬಳವಿಲ್ಲವೆಂದು ಸತ್ತು ಹೋದ, ಇವರು ಉತ್ತರ ಸಿಗುವುದಕ್ಕೆ ಇನ್ನು ಯಾರ್ಯಾರು ಸಾಯಬೇಕು? ಅವರಿಗೆ ಏನು ಪರಿಹಾರ ಕೊಡುಲಾಗುತ್ತದೆನ್ನುವುದರ ಬಗ್ಗೆ ಉತ್ತರ ಕೊಡಲಾಗುವುದಿಲ್ಲವೆಂದರೆ ಹೇಗೆ? ಸರ್ಕಾರ ಸ್ವಲ್ಪ ಮಾನವೀಯತೆಯನ್ನು ತೋರಿಸಬೇಕಲ್ಲವೇ?

ಅಧ್ಯಕ್ಷರು: ಅವರ ಹತ್ತಿರ ಏನಾಯಿತು ಎಂಬ ಬಗ್ಗೆ ಮಂತ್ರಿಗಳಲ್ಲಿ ವರದಿಯೆ ಇಲ್ಲವೆಂದಾಗ ಪರಿಹಾರ ಕೊಡುವ ಬಗ್ಗೆ ಹೇಗೆ ಹೇಳಲಾಗುತ್ತದೆ. ಮಂತ್ರಿಗಳೇ, ನಮ್ಮ ಅಧಿವೇಶನ 31ನೇ ತಾರೀಖಿಗೆ ಮುಗಿಯುತ್ತದೆ ಅಷ್ಟರೊಳಗೆ ಆ ಮಾಹಿತಿಯನ್ನು ತರಿಸುವುದು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ: ತರಿಸಿಕೊಡುತ್ತೇನೆ ಅಧ್ಯಕ್ಷರೆ.

ಶ್ರೀ ಎನ್.ಯೋಗೀಶ್ ಭಟ್: ನಾನು ವೈಯಕ್ತಿಕವಾಗಿ ಇದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಾಗ, ವೈಯಕ್ತಿಕವಾಗಿ ಇದನ್ನು ಪರಿಶೀಲನೆ ಮಾಡಿ ನಾನು ನ್ಯಾಯ ಕೊಡುತ್ತೇನೆಂದು ಹೇಳಿದ್ದರು ಹಾಗೆ ಅಬಕಾರಿ ಸಚಿವರಾದ ಶ್ರೀ ಎಂ.ಎಂ.ನಾಣಯ್ಯನವರ ಗಮನಕ್ಕೇ ಬಂದಾಗಲು ನ್ಯಾಯ ಒದಗಿಸಿಕೊಡಲಾಗುತ್ತದೆಂದು ಹೇಳಿದ್ದರು. ನನಗೆ ಬೇಸರ ತರುವುದೇನೆಂದರೆ, ಈ ಬಗ್ಗೆ ಕೇವಲ ಕ್ರೀಡಾ ಸಚಿವರದ್ದು ಮಾತ್ರ ಇವರಿಬ್ಬರ ನಿರ್ಲಕ್ಷ್ಯವು ಕೂಡ ಮೂರು

ತಿಂಗಳಿಂದ ಆಗಿದೆ, ಇದನ್ನು ಕೂಡ ನಾನು ಖಂಡಿಸುತ್ತಿದ್ದೇನೆ. ಏಷ್ಯಾನ್ ಚಾಂಪಿಯನ್ ಆಗಿರುವ ಸುಧಾಕರಪ್ರಭು ಎಂಬ ಕ್ರೀಡಾಪಟು ಪೋಲಿಸ್ ಇಲಾಖೆಯಲ್ಲಿದ್ದು ಅವರಿಗೆ ಪೋಲಿಸ್ ಇಲಾಖೆ ಅವರು ರಾಷ್ಟ್ರೀಯ ಚಾಂಪಿಯನ್ ಆಗಿದ್ದರು ಕೂಡ ಈ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಕೊಡದೆ ಇರುವುದರಿಂದ ಅನ್ಯಾಯವಾಗಿದೆ, ಸರ್ಕಾರದ ಯಾವುದೇ ಇಲಾಖೆಯಲ್ಲಿ ಕ್ರೀಡಾಪಟುಗಳು ರಾಜ್ಯ ಅಥವಾ ರಾಷ್ಟ್ರ ಚಾಂಪಿಯನ್ ಆಗಿದ್ದರೆ ಅವರು ಭಾಗವಹಿಸಲು ಅವಕಾಶ ಕೊಡುವ ಒಂದು ಸುತ್ತೋಲೆಯನ್ನು ಸರ್ಕಾರ ಹೊರಡಿಸಬೇಕೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು: 31ನೇ ತಾರೀಖಿನೊಳಗೆ ಉತ್ತರವನ್ನು ಸಂಬಂಧಿಸಿದ ಮಂತ್ರಿಗಳು ತರಿಸಿ ಕೊಡುತ್ತಾರೆ.

ಗ್ರಾಮ ಅರಣ್ಯ ಸಮಿತಿಗಳು.

69(729)

ಶ್ರೀ ಬಿ.ಹೆಚ್.ಬನ್ನಿಕೋಡ್(ಹಿರೇಕೆರೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸುವ ಉದ್ದೇಶವೇನು?

ಆ) ಈವರೆಗೆ ರಚಿಸಿರುವ ಸಮಿತಿಗಳ ವಿವರ ತಾಲ್ಲೂಕುವಾರು ನೀಡುವುದು?

ಇ) ಗ್ರಾಮ ಅರಣ್ಯ ಸಮಿತಿಗಳು ಅರಣ್ಯ ಇಲಾಖೆಯ ಅಧಿಕಾರಿಗಳಿಗಿಂತ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಅರಣ್ಯಗಳನ್ನು ರಕ್ಷಣೆ ಮಾಡಿರುವುದನ್ನು ಸರ್ಕಾರ ಗಮನಿಸಿದೆಯೆ?

ಈ) ಹಾಗಿದ್ದಲ್ಲಿ, ಗ್ರಾಮ ಅರಣ್ಯ ಸಮಿತಿಗಳಿಗೆ ಇನ್ನೂ ಹೆಚ್ಚಿನ ಆರ್ಥಿಕ ಅನುಕೂಲತೆ ಹಾಗೂ ಹಕ್ಕು ಮತ್ತು ಕರ್ತವ್ಯಗಳನ್ನು ನೀಡಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) 1. ಅರಣ್ಯ ರಕ್ಷಣೆ, ನಿರ್ವಹಣೆ ಪಾಲುಗಾರಿಕೆಯಲ್ಲಿ ಅರಣ್ಯ ಇಲಾಖೆಯ ಜೊತೆ ಸಕ್ರಿಯವಾಗಿ ಭಾಗವಹಿಸುವುದು ಮತ್ತು ಅರಣ್ಯ ಉತ್ಪನ್ನಗಳನ್ನು ಅನುಭೋಗಿಸುವ ಹಕ್ಕು ಪಡೆಯುವುದು.